೪) ಹಾಗಿದ್ದಲ್ಲಿ ಈ ಕಾರ್ಯಕ್ರಮದ ಅನ್ವಯ ಹೊಸದುರ್ಗ ತಾಲ್ಲೂಕಿನ ಎಷ್ಟು ಜನ ರೈತರಿಗೆ ಪ್ರಯೋಜನ ದೊರೆಯಲಿದೆ, ಹಾಗೂ ಇದರಿಂದ ರೈತರಿಗೆ ನೀಡುವ ಸೌಲಭ್ಯಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).

೧) ಹೌದು.

೨) ಹೌದು.

೩) ಉದ್ದೇಶಿತ ಹಾಲಿನ ಡೈರಿ ಸಂಖ್ಯೆ ೧.

ಸದ್ಯಕ್ಕೆ ಹೊಸದುರ್ಗ ಹಾಗೂ ಹಿರಿಯೂರು ತಾಲ್ಲೂಕುಗಳು ತುಮಕೂರು ಒಕ್ಕೂಟದಲ್ಲಿರುವುದರಿಂದ ಅವುಗಳನ್ನು ಹೊರತುಪಡಿಸಿ ಚಿತ್ರದುರ್ಗ ಜಿಲ್ಲೆಯ ಇತರ ತಾಲ್ಲೂಕುಗಳನ್ನು ಇದರ ವ್ಯಾಪ್ತಿಯಲ್ಲಿತರಲು ಯೋಜಿಸಲಾಗಿದೆ.

ತಾಂತ್ರಿಕ/ಆರ್ಥಿಕ ಪರಿಶೀಲನೆ ಹಾಗೂ ಜೀವನ ಸಾಮರ್ಥ್ಯವನ್ನು ಪರಿಗಣಿಸಿ ಸೂಕ್ತ ಸ್ಥಳಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು.

೪) ಈಗಾಗಲೇ ವಿಚಿತವಾಗಿ ಹೇಳಲಾಗದು. ಆದ್ಯಾಗ್ಯೂ, ಸಹಕಾರ ಸಂಘಗಳನ್ನು ಸ್ಥಾಪಿಸಲು ಅರ್ಜಿಯಾದ ಹಳ್ಳಿಗಳಲ್ಲಿಯು ರೈತರು ಈ ಯೋಜನೆಯ ಪ್ರಯೋಜನವನ್ನು ಪಡೆಯಬಹುದಾಗಿದೆ.

ರೈತರಿಗೆ ನೀಡುವ ಸೌಲಭ್ಯಗಳು :

ನಿಶ್ಚಿತ ಪೂರಂಕಟ್ಟೆ, ನಿಗದಿತ ಬೆಲೆ, ಪಶು ಆರೋಗ್ಯ ಸಂರಕ್ಷಣೆ, ಕೃತಕ ಗರ್ಭಧಾರಣೆ, ಪ್ರಥಮ ಚಿಕಿತ್ಸೆ, ಹೈನುಗಾರಿಕೆಯಲ್ಲಿ ತೊಡಗಿದ ರೈತರಿಗೆ ತರಬೇತಿ, ಹಾಲು ಉತ್ಪಾದಕರ ಸಂಘಗಳ ನೌಕರರಿಗೆ ತರಬೇತಿ, ಮೇವಿನ ಅಭಿವೃದ್ಧಿ, ಪಶು ಆಹಾರ ಪೂರೈಕೆ ಮುಂತಾದ ಸೌಲಭ್ಯಗಳನ್ನು ಸೂಕ್ತ ಬೆಲೆಯಲ್ಲಿ ಅಥವಾ ರಿಯಾಯಿತಿ ದರದಲ್ಲಿ (Subsidised rates) ನೀಡಲಾಗುವುದು.

ತರೀಕೆರೆ ತಾಲ್ಲೂಕಿನ ಗ್ರಾಮಗಳಿಗೆ ಬೀದಿ ದೀಪಗಳನ್ನು ಒದಗಿಸುವ ಬಗ್ಗೆ

೮೫೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) — ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಬೀದಿ ದೀಪಗಳನ್ನು ಒದಗಿಸಲಾಗಿದೆ.

ಆ) ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಮತ್ತು ಆ) ತರೀಕೆರೆ ತಾಲ್ಲೂಕಿನಲ್ಲಿ ೧೯೭೧ರ ಜನಗಣತಿಯಂತೆ ಜನ ವಾಸವಾಗಿರುವ ಎಲ್ಲಾ ೧೯ ಗ್ರಾಮಗಳೂ ವಿದ್ಯುದ್ದೀಕರಣವಾಗಿದ್ದು ಇವುಗಳೆಲೆಲ್ಲಾ ಬೀದಿ ದೀಪಗಳಿವೆ.

ಆದರೆ ೧೯೮೧ರ ಜನಗಣತಿಯಂತೆ ಇನ್ನೂ ೩ ಹೊಸ ಗ್ರಾಮಗಳು ಬಂದಿದ್ದು ಇವುಗಳು ವಿದ್ಯುದ್ದೀಕರಣವನ್ನು ೧೯೮೮-೮೯ರಲ್ಲಿ ಮಾಡುವ ಕಾರ್ಯಕ್ರಮವಿದೆ.

ತರೀಕೆರೆ ತಾಲ್ಲೂಕಿನ ಲಂಬಾಣಿ ತಾಂಡಗಳಿಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

೮೫೩. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) —ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಹರಿಜನ ಕಾಲೋನಿ ಮತ್ತು ಲಂಬಾಣಿ ತಾಂಡಗಳಿಗೆ ವಿದ್ಯುತ್ ಸರಬರಾಜು ಮಾಡಬೇಕಾಗಿದೆ.